## ಇಲ್ಲಿಯವರೆಗೆ...



ಮಹಾವೃಕ್ಷವನ್ನು ಕಡಿಯುವುದನ್ನು ವಿರೋಧಿಸಿ ರೂಪುಗೊಂಡ ಚಳವಳಿ ದಿನದಿಂದ ದಿನಕ್ಕೆ ಸವಕಳಿಯಾಗತೊಡಗಿತು. ಪ್ರತಿಭಟನೆಯ ಸ್ಥಳದಲ್ಲಿನ ಕಾವು ಕಡಿಮೆಯಾಗುತ್ತಿರುವ ಸಂದರ್ಭದಲ್ಲೇ, ವಿರೋಧಕ್ಕೆ ಕೊನೆಯ ಮೊಳೆ ಎನ್ನುವಂತೆ ಕೊರೊನಾ ಸೋಂಕು ದೇಶದಲ್ಲಿ ಕಾಣಿಸಿಕೊಂಡಿತು. ಸೋಂಕನ್ನು ನಿಯಂತ್ರಿಸುವ ಉದ್ದೇಶದಿಂದ ದೇಶದಲ್ಲಿ ಲಾಕ್‌ಡೌನ್ ಘೋಷಣೆಯಾಯಿತು. ಜನರೆಲ್ಲ ಮನೆ ಸೇರಿಕೊಂಡ ಅವಧಿ ಮರವನ್ನು ಉಳಿಸಿಕೊಳ್ಳುವ ಪ್ರತಿಭಟನೆಯನ್ನು ತಣ್ಣಗಾಗಿಸಿತು. ಅದೇ ಕಾಲಕ್ಕೆ ತಲೆದೋರಿದ ಚಂಡಮಾರುತದ ಅಬ್ಬರ ಭಾರೀ ಮಳೆಗೆ ಕಾರಣವಾಗಿ ಮಹಾವೃಕ್ಷದ ಮಣ್ಣಿನ ಹಿಡಿತವನ್ನು ಸಡಿಲವಾಗಿಸತೊಡಗಿತು. ದೇಹದಲ್ಲಿನ ಕಸುವೆಲ್ಲ ಸೋರಿಹೋದಂತಾಗಿ ಮಹಾವೃಕ್ಷ ಮಣ್ಣಿನಲ್ಲಿ ಪವಡಿಸಿತು. ಮಳೆಯ ಕಾರಣದಿಂದಾಗಿ ವಯಸ್ಸಾದ ವೃಕ್ಷ ನೆಲಕಚ್ಚಿತು ಎಂದು ಜನ ಭಾವಿಸಿದರು. ಆದರೆ, ಮಹಾವೃಕ್ಷದ ಬೇರುಗಳನ್ನು ಕತ್ತರಿಸಿ ಅದನ್ನು ದುರ್ಬಲಗೊಳಿಸಲಾಗಿತ್ತು ಎನ್ನುವ ಸಂಚು ಜನರಿಗೆ ತಿಳಿಯವುದಾದರೂ ಹೇಗೆ?

ಕೇಕೆ ಹೊಡೆದರೆ, ಹದಿಹರೆಯದ ಹುಡುಗರು ಸಿಳ್ಳೆ ಹೊಡೆದು ಸಂಭ್ರಮಿಸಿದರು. ಆದರೆ ಅನಾಥಭಾವ ಆವರಿಸಿದ್ದನ್ನು ಮಾತ್ರ ಹಿರಿಯರ ಮುಖಗಳಲ್ಲಿ ಕಂಡೆ. ನನ್ನ ಜೊತೆಗಿನ ಅವಿನಾಭಾವ ಸಂಬಂಧಗಳನ್ನು ನೆನೆಯುತ್ತ ಅವರ ಕಣ್ಣಾಲಿಗಳು ತೇವಗೊಂಡದ್ದು ನನಗೂ ದುಃಖ ತರಿಸಿತು.

ಅಲ್ಲಿಂದ ಹೆಣದ ಮೆರವಣಿಗೆಯಂತೆ ನನ್ನ ಪ್ರಯಾಣ ಆರಂಭವಾಯಿತು. ಕೋವಿಡ್ ಸಲುವಾಗಿ ನನ್ನ ಹಿಂದೆ ಮುಂದೆ ಜನ ಸೇರದೇ, ಎಲ್ಲರೂ ಅವರವರ ಮನೆಯ ಮಹಡಿಯ ಮೇಲೆ ಕುಂತು ನಿಂತು ನೋಡುತ್ತಿದ್ದರು.

ಮೊಟ್ಟಮೊದಲಬಾರಿಗೆನನ್ನಿಷ್ಟದಂತಲ್ಲದಿದ್ದರೂ ಜಂಗಮವಾಗಲಾರಂಭಿಸಿದ್ದೆ. ನಾನು ಇಷ್ಟು ದಿನ ಕಂಡ ಎಷ್ಟೋ ಕಟ್ಟಡಗಳ ಇನ್ನೊಂದು ಆಯಾಮವನ್ನು ಇವತ್ತು ಕಾಣಲಾರಂಭಿಸಿದ್ದೆ. ಆದರೆ ಪಂಚೇಂದ್ರಿಯಗಳಾದ ಕಣ್ಣು, ಕಿವಿ, ಮೂಗು, ಬಾಯಿಯಂತಿದ್ದ ಎಲೆಗಳು ಒಂದೂ ಇಲ್ಲದೇ, ಕೇವಲ ಚರ್ಮದಿಂದಷ್ಟೇ ದಕ್ಕಬಹುದಾದ ಆ ಸಂವೇದನೆಗಳು ಮಸುಕು ಮಸುಕಾಗಿ ಸ್ವೀಕಾರವಾಗುತ್ತಿತ್ತು. ಬಸವನಹುಳುಗಿಂತಲೂ ನಿಧಾನವಾದ ಲಾರಿಯ ತೆವಳುವಿಕೆಯಿಂದಾಗಿ ನನ್ನ ಗಮ್ಯ ಸೇರಬೇಕಾದರೆ ಕನಿಷ್ಠ ಮೂರು ದಿನವಾದರೂ ಬೇಕಾಗುತ್ತಿತ್ತು, ಯಾವುದೇ ಅಡ್ಡಿ ಆತಂಕಗಳು ಎದುರಾಗದಿದ್ದರೆ.

ಪೊಲೀಸರು ರಸ್ತೆಯ ಟ್ರಾಫಿಕ್ಕನ್ನೆಲ್ಲ ಮೊದಲೇ ಅತ್ತಿತ್ತ ಸರಿಸುತ್ತ ಸುಗಮ ಸಂಚಾರಕ್ಕೆ ಅವಕಾಶ ಮಾಡಿಕೊಡುತ್ತಿದ್ದರು. ವಿದ್ಯುತ್ ಇಲಾಖೆಯವರು ಕರೆಂಟನ್ನು ನಿಷ್ಕ್ರಿಯಗೊಳಿಸಿ, ಅಡ್ಡ ಬಂದಿದ್ದ ವೈರುಗಳನ್ನೆಲ್ಲ ಮೊದಲೇ ಬಿಚ್ಚುತ್ತ ನನ್ನ ಮೇಲ್ಭಾಗದ ಕೊಂಬೆಗೂ ತಗುಲದಂತೆ ನೋಡಿಕೊಳ್ಳುತ್ತಿದ್ದರು.

ನೇರವಾಗಿದ್ದ ರಸ್ತೆಯಲ್ಲಿ ಲಾರಿಯ ತೆವಳುವಿಕೆಗೆ ಯಾವುದೇ ಅಡ್ಡಿ ಆತಂಕಗಳು ಇರಲಿಲ್ಲ. ಆದರೆ ನಮ್ಮ ದಾರಿಯಲ್ಲಿದ್ದ ಎಲ್ಲಾ ರಸ್ತೆಗಳೂ ನೇರವಾಗಿರಲು ಹೇಗೆ ಸಾಧ್ಯ. ದಾರಿಯುದ್ದಕ್ಕೂ ಎರಡು ಮೂರು ತಿರುವುಗಳು ಇದ್ದವು. ಒಂದೊಂದು ತಿರುವಿನಲ್ಲೂ ಬಹಳ ತ್ರಾಸದಾಯಕವಾದ ಪ್ರಯಾಣವಾಗಿತ್ತು. ಹೆಬ್ಬಾವಿನಂಥ ಅಷ್ಟುದ್ದದ ಲಾರಿಯನ್ನು ಹಿಂದಕ್ಕೂ ಮುಂದಕ್ಕೂ ಆಡಿಸುತ್ತ ಒಂದೊಂದೇ ಅಡಿಯನ್ನು ಜರುಗಿಸುತ್ತ ಸಾಗುವ ವೇಳೆಗೆ ಅಕ್ಕಪಕ್ಕದ ಮನೆಗಳ, ಅಂಗಡಿಯ ಅದೆಷ್ಟೋ ಜನಗಳ ಹೃದಯ ಕೈಗೆ ಬಂದುಬಿಟ್ಟಿರುತ್ತಿತ್ತು. ಒಂದೊಂದು ಸಲ ವಾಲಿದಾಗಲೂ ನಾನು ಅತ್ತ ಇತ್ತ ವಾಲಾಡಿ ಎಲ್ಲಿ ಬಿದ್ದುಹೋಗಿಬಿಡುತ್ತೇನೋ ಎಂಬ ಅಳುಕು ನನ್ನದಾಗಿದ್ದರೆ, ಎಲ್ಲಿ ಲಾರಿಯೋ ನನ್ನ ಬುಡವೋ ತಮ್ಮ ಆಸ್ತಿಗೆ ತಗುಲಿ ಮುಕ್ಕಾಗುವುದೋ ಎಂಬ ಆತಂಕ ಜನರದಾಗಿತ್ತು.

ಇಂಥ ವಾಲಾಟದಲ್ಲಿ ಸಮನ್ವಯತೆಯನ್ನು ಕಾಪಾಡಿಕೊಂಡು ಸಮಸ್ಥಿತಿಗೆ ಬರುವಂತಾಗುವಷ್ಟರಲ್ಲಿ ನನಗೆ ಸಾಕುಸಾಕಾಗಿ ಹೋಗಿತ್ತು. ಮನುಷ್ಯರಂತೆ ಹೃದಯವೆಂಬುದೇನಾದರೂ ಇದ್ದಿದ್ದರೆ ಬಹುಶಃ ಇಷ್ಟರಲ್ಲಿ ಒಡೆದುಹೋಗಿರುತ್ತಿತ್ತೇನೋ. ಆದಾಗ್ಯೂ ನನ್ನ ಕೆಳಭಾಗದ ಚರ್ಮದಂಥ ತೊಗಟೆಯಂತೂ ಲಾರಿಯ ಕೆಳಗಿನ ಕಬ್ಬಿಣದ ನೆಲಹಾಸಿಗೆಗೆ ಉಜ್ಜೀ ಉಜ್ಜಿ ಜಜ್ಜಿಹೋಗುತ್ತಿತ್ತು. ಆಗೆಲ್ಲ ಚರ್ಮ ಕಿತ್ತಿಹೋದಂಥ ಉರಿ. ರುಂಡಮುಂಡಗಳನ್ನೆಲ್ಲ ಕಡಿಸಿಕೊಂಡಿರುವಂಥ ನೋವಿಗಿಂತ ಇದು ಹೆಚ್ಚೇನಲ್ಲ ಎನಿಸಿದರೂ, ಆ ನೆನಪು ನೋವನ್ನು ಪದೇ ಪದೇ ಕೆದಕುತ್ತಿತ್ತು.

ಬೆಳಗಿನಿಂದ ಸಂಜೆವರೆಗೆ ಮಾತ್ರ ನನ್ನನ್ನು ಸಾಗಿಸುತ್ತಾ, ಸಂಜೆಯಾಗುತ್ತಿದ್ದಂತೆ ಎಲ್ಲಿರುತ್ತಿದ್ದೆನೋ ಅಲ್ಲಿಯೇ ರಸ್ತೆ ಪಕ್ಕಕ್ಕೆ ಹಾಕಿ, ಊಟ ವಿಶ್ರಾಂತಿಗೆಂದು ಹೊರಟು ಹೋಗುತ್ತಿದ್ದರು. ಮನುಷ್ಯರಿಗೆ ಮಾತ್ರ ಊಟ, ನೀರು, ನಿದ್ದೆ ಬೇಕು; ನನಗೇನೂ ಅಗತ್ಯವಿಲ್ಲ ಎಂದು ಅವರು ಭಾವಿಸಿರಬೇಕು. ನನ್ನ ಬೇರುಗಳನ್ನೆಲ್ಲ ಕಡಿದುಕೊಂಡು ಬಂದಿರುವುದರಿಂದ ಬೃಹತ್ ಗಾತ್ರದ ನನ್ನ ದೇಹಕ್ಕೂ ಹಸಿವು, ಬಾಯಾರಿಕೆಗಳಾಗುತ್ತಿದ್ದರೂ ಅದನ್ನು ನೀಗಿಸಿಕೊಳ್ಳುವುದಾದರೂ ಹೇಗೆ? ಕತ್ತರಿಸಿದ ಅಂಗದಿಂದ ರಕ್ತ ಸುರಿಯುವಂತೆ ಕಡಿಯಲ್ಪಟ್ಟ ಎಲ್ಲ ರೆಂಬೆಗಳ ತುದಿಯಿಂದಲೂ, ಹಿಮ್ಮುಖವಾಗಿ ಚಲಿಸಲಾರದಂಥ ದ್ರವವು, ಮೆಲ್ಲಮೆಲ್ಲಗೆ ಜಿನುಗುತ್ತಲಿತ್ತು. ಹೀಗೆ ನೀರಿನ ಅಂಶ ಆಚೆ ಹೋಗುತ್ತಿದ್ದುದರಿಂದ ನೀರಿನ ಹಾಹಾಕಾರ ನನಗೂ ಉಂಟಾಗುತ್ತಿತ್ತು.

ಮೂರು ಹಗಲು ಮೂರು ರಾತ್ರಿ ಹೀಗೆ ನಿಂತು ನಿಂತು ಗಾಂಧಿ ಪಾರ್ಕನ್ನು ತಲುಪುವ ವೇಳೆಗೆ ತೂಫಾನಿನ ಆರ್ಭಟವೆಲ್ಲ ಮಾಯವಾಗಿ ಬಿಸಿಲು ಕಾಯಲಾರಂಭಿಸಿತ್ತು. ಎಂಥ ಸುಡುವ ಬಿಸಿಲು ಅದು. ರೆಂಬೆ, ಕೊಂಬೆ, ಟಿಸಿಲುಗಳ ಜತೆ ಎಲೆಗಳೂ ಇಲ್ಲದೇ ಕಾಂಡ ಬುಡಮೇಲಾಗಿದ್ದುದರಿಂದ, ತೊಗಟೆಯೆಲ್ಲ ಎಲ್ಲಿ ಆ ಬಿಸಿಗೆ ಬೆಂಕಿ ಹೊತ್ತಿಕೊಂಡುಬಿಡುತ್ತದೋ ಎಂಬಷ್ಟು ಶಾಖ ಆವರಿಸಿತ್ತು.

ಗಾಂಧಿ ಪಾರ್ಕಲ್ಲಿ ಜೆಸಿಬಿಯಿಂದ ತೆಗೆದಿದ್ದ ದೊಡ್ಡ ಗುಂಡಿಯನ್ನು ನೋಡುತ್ತಿದ್ದಂತೆಯೇ ನನ್ನನ್ನು ಇಲ್ಲಿಯೇ ಹೂತುಬಿಡುತ್ತಾರೇನೋ ಎಂದು ಕ್ಷಣ ಆತಂಕವಾದದ್ದು ನಿಜ. ಆದರೆ ಹಾಗೆ ಹೂತು ಹಾಕುವಂತಿದ್ದರೆ ಇಲ್ಲಿಯವರೆಗೆ ಯಾಕಿಷ್ಟು ಕಷ್ಟಪಟ್ಟು ಹೊತ್ತು ತರುತ್ತಿದ್ದರು ಎಂದು ನನಗೆ ನಾನೇ ಸಮಾಧಾನ ಮಾಡಿಕೊಂಡೆ.

ಮತ್ತೊಂದು ದಿನದ ನಂತರ ನನ್ನ ಬುಡವು ಆ ಗುಂಡಿಯೊಳಗೆ ಬಂದು ಬೀಳುವಂತೆ ಲಾರಿಯ ಹಿಂಭಾಗವನ್ನು ತಂದು ನಿಲ್ಲಿಸುವಲ್ಲಿ ಯಶಸ್ವಿಯಾದರು. ಮುಖ್ಯಮಂತ್ರಿಗಳು ಬಂದ ನಂತರ ನನ್ನನ್ನು ಆ ಗುಂಡಿಯೊಳಗೆ ಇಳಿಬಿಡಬೇಕೋ, ಅಥವಾ ಮೊದಲೇ ಬುಡವನ್ನು ಇಳಿಸಿ ನೆಟ್ಟಗೆ ನಿಲ್ಲಿಸಿಟ್ಟುಕೊಂಡಿದ್ದು, ಮುಖ್ಯಮಂತ್ರಿಯಿಂದ ಮಣ್ಣನ್ನು ಸಾಂಕೇತಿಕವಾಗಿ ಗುದ್ದಲಿಯಿಂದ ಎಳೆಸುವ ಮೂಲಕ ಉದ್ಘಾಟಿಸಬೇಕೋ ಎಂದು ತೀರ್ಮಾನಿಸಲು ಜಿಲ್ಲಾಧಿಕಾರಿಗಳು ಒಂದು ದಿನ ತೆಗೆದುಕೊಂಡರು. ಮುಖ್ಯಮಂತ್ರಿಗಳ ಅಪಾಯಿಂಟ್‌ಮೆಂಟ್ ಸಿಗದಿದ್ದರಿಂದ ಹಾಗೂ ಬಂದವರಿಗೆ ಅಷ್ಟು ಬೃಹದಾಕಾರದ ಮರವನ್ನು ನಿಲ್ಲಿಸಲು ಬೇಕಾಗುವಷ್ಟು ಕಾಲ ಕಾಯುವಷ್ಟು ತಾಳ್ಮೆ ಇರದುದರಿಂದ ಮೊದಲೇ ನಿಲ್ಲಿಸುವುದೆಂದು ನಿರ್ಧಾರವಾಯಿತು. ನಂತರ ಬುಡಕ್ಕೆ, ತುಂಬಿದ ನದಿಗೆ ಅರ್ಪಿಸುವಂತೆ ಬಾಗಿನದಂತೆ ಅರಿಶಿನ ಕುಂಕುಮಗಳನ್ನು, ಅಕ್ಕಿ ಬೆಲ್ಲವನ್ನು ಅರ್ಪಿಸಿ ಮಣ್ಣು ಎಳೆಸಿ, ನೀರು ಹುಯ್ಯಿಸುವುದೆಂದು ತೀರ್ಮಾನವಾಯಿತು.

ನನ್ನನ್ನು ಮತ್ತೆ ಅದೇ ರೀತಿ ಎರಡು ಕ್ರೇನುಗಳಿಂದ